ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಅಂತಾರಾಷ್ಟ್ರೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE 6/2/20

# ಸಂಸತ್ತಿನಲ್ಲಿ ಸ್ಫೋಟಗೊಂಡ ಟ್ರಂಪ್-ಪೆಲೊಸಿ ಶೀತಲಸಮರ



ಅಧ್ಯಕ್ಷ ಡೊನಾಲ್ಡ್ ಟ್ರಂಪ್ - ಪ್ರತಿಪಕ್ಷ ನಾಯಕಿ ನ್ಯಾನ್ಸಿ ಪೆಲೊಸಿ ನಡುವೆ ಬಹುದಿನಗಳಿಂದ ನಡೆಯುತ್ತಿದ್ದ ಶೀತಲಸಮರ ಸಂಸತ್ತಿನಲ್ಲಿ ಸ್ಫೋಟಗೊಂಡಿತು. ಮೊದಲು ಟ್ರಂಪ್ ಉದಾಸೀನ ತೋರಿದರು. ನಂತರ ಅದನ್ನು ಪ್ರತಿಭಟಿಸಿ ಪೆಲೊಸಿ ಅಧ್ಯಕ್ಷರ ಭಾಷಣದ ಪ್ರತಿ ಹರಿದು ಹಾಕಿದರು.

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರತಿಪಕ್ಷ ಡೆಮಾಕ್ರಟಿಕ್ ನಾಯಕಿ ಹಾಗೂ ಹೌಸ್ ಆಫ್ ರೆಪ್ರೆಸೆಂಟೆಟೀವ್ಸ್‌ನ ಸ್ಪೀಕರ್ ನ್ಯಾನ್ಸಿ ಪೆಲೊಸಿ ನಡುವಿನ ಶೀತಲ ಸಮರ ಸಂಸತ್ತಿನಲ್ಲಿಯೇ ಮಂಗಳವಾರ ಸ್ಫೋಟಗೊಂಡಿದೆ.

ವಾರ್ಷಿಕ ಭಾಷಣದ ಕಾರ್ಯಕ್ರಮಕ್ಕೆ ಆಗಮಿಸಿದ ಡೊನಾಲ್ಡ್ ಟ್ರಂಪ್ ಅವರಿಗೆ ಭಾಷಣ ಆರಂಭಕ್ಕೂ ಮುನ್ನ ಹಸ್ತಲಾಘವ ನೀಡಲು ಪೆಲೊಸಿ ಮುಂದಾದರು. ಆದರೆ ಅವರ ಬಗ್ಗೆ ಅಸಮಾಧಾನಗೊಂಡಿದ್ದ ಟ್ರಂಪ್, ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿ ಕೇವಲ ನ್ಯಾನ್ಸಿ ಪಕ್ಕದಲ್ಲಿದ್ದ ಅಮೆರಿಕ ಉಪಾಧ್ಯಕ್ಷ ಮೈಕ್ ಪೆನ್ಸ್ ಅವರಿಗೆ ಮಾತ್ರ ಕೈಕುಲುಕಿದರು. ನಂತರ ಸಂಸತ್ ಸದಸ್ಯರನ್ನು ಉದ್ದೇಶಿಸಿ ಟ್ರಂಪ್ ಸುಮಾರು 1 ಗಂಟೆ 18 ನಿಮಿಷ ಭಾಷಣ ಮಾಡಿದರು. ಭಾಷಣದಲ್ಲಿ ಎಲ್ಲಿಯೂ ಕೂಡ ಟ್ರಂಪ್ ತಮ್ಮ ವಿರುದ್ಧದ ವಾಗ್ದಂಡನೆ ನಿಲುವಳಿ ಕುರಿತು ಪ್ರಸ್ತಾಪಿಸಲಿಲ್ಲ.

ಇದರಿಂದ ಅಸಮಾಧಾನಗೊಂಡ ನ್ಯಾನ್ಸಿ ಅವರು ಟ್ರಂಪ್ ಅಲಕ್ಷ್ಯಕ್ಕೆ ತಿರುಗೇಟು ನೀಡುವ ನಡೆಯಾಗಿ ಅವರು ಮಾಡಿದ ಭಾಷಣದ ಪ್ರತಿಯನ್ನು ಸಂಸತ್ತಿನ ಎದುರೇ ಹರಿದು ಹಾಕಿದರು.

ಬಳಿಕ ಈ ಕುರಿತು ಸುದ್ದಿಗಾರರು ಪ್ರಶ್ನಿಸಿದ್ದಕ್ಕೆ ನ್ಯಾನ್ಸಿ ಅವರು ,'' ನನಗೆ ಅತ್ಯಂತ ವಿನಯಶೀಲ ಪರ್ಯಾಯ ನಡೆಯಾಗಿ ಹೊಳೆದಿದ್ದು ಇದೊಂದೇ, '' ಎಂದು ಟ್ರಂಪ್‌ಗೆ ಪರೋಕ್ಷವಾಗಿ ಕುಟುಕಿದರು.